ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ
ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ
**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004

# ಸ್ವಚ್ಛತೆಯೆ ನಿಜವಾದ ಬದುಕು

ಪೂಜ್ಯ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳು

**ಸುತ್ತೂರು, ಮೇ-12:** ಒಳಗೆ-ಹೊರಗೆ ಸದಾ ಸ್ವಚ್ಛತೆಯುಳ್ಳವರಾಗಿ ಕೊಳ್ಳುವುದೇ ನಿಜವಾದ ಬದುಕು ಎಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಪ್ರವಚನದಲ್ಲಿ ತಿಳಿಸಿದರು.

ಒಳ್ಳೆಯ ವಿಚಾರಗಳು, ಉತ್ತಮ ಭಾವನೆಗಳು, ಶುದ್ಧ ಹಸ್ತ, ಉತ್ತಮ ಮತ್ತು ಪರಿಶುದ್ಧ ಕೆಲಸ ಇವು ಜಗತ್ತಿನ ಅತೀ ಸುಂದರ ತಾಣಗಳು. ಇದನ್ನು ಅನುಭವಿಸುವ ಮನಸ್ಸು ಬೇಕು. ಜಗತ್ತಿನ ಸ್ಪರ್ಶ ಮಾಡದಿದ್ದರೆ, ಮನಸ್ಸು ಕತ್ತಲೆಯಲ್ಲೆ ಅಡಗಿರುತ್ತದೆ. ಇದನ್ನು ಬೆಳಕಿನೆಡೆಗೆ ಒಯ್ಯಬೇಕಾದರೆ ಜಗತ್ತಿನ ವಿವಿಧ ತಾಣಗಳನ್ನು ನೋಡಿ ಆನಂದಿಸಬೇಕು. ಒಬ್ಬ ಶಿಲ್ಪಿ ಕಲ್ಲು ಬಂಡೆಯನ್ನು ಕೆತ್ತಿ ಅದನ್ನು ಒಂದು ಸುಂದರ ಮೂರ್ತಿಯನ್ನಾಗಿ ಮಾಡುತ್ತಾನೆ. ಆ ಸುಂದರ ಮೂರ್ತಿ ಮಾಡುವ ಶಿಲ್ಪಿಯ ಸುಂದರ ಮನಸ್ಸನ್ನು ನಾವು ಬೆಳೆಸಿಕೊಳ್ಳಬೇಕು. ಈ ಜಗತ್ತಿನಲ್ಲಿ ನಾವು ಎಷ್ಟು ವರ್ಷ ಬದುಕುತ್ತೇವೆಂಬುದು ಮುಖ್ಯವಲ್ಲ, ಹೇಗೆ ಬದುಕುತ್ತೇವೆಂಬುದು ಮುಖ್ಯ, ಅದುವೇ ಸುಂದರ ಬದುಕು. ಜಗತ್ತು ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಕಾಣುತ್ತದೆ. ರಾಜಕಾರಣಿಗಳಿಗೆ ಬೇರೆ, ತತ್ವಜ್ಞಾನಿಗಳಿಗೆ ಬೇರೆ, ಕಲಾವಿದನಿಗೆ ಬೇರೆ. ಹೀಗೆ ನೋಡುಗರಿಗೆ ಬೇರೆ ಬೇರೆ ರೀತಿಯಲ್ಲಿ ಜಗತ್ತು ಕಾಣುತ್ತದೆ. ಒಳ್ಳೆಯದನ್ನು ನೋಡಿದರೆ ಒಳ್ಳೆಯದಾಗಿ ಕಾಣುತ್ತದೆ, ಕೆಟ್ಟದು ನೋಡಿದರೆ ಕೆಟ್ಟದಾಗಿಯೆ ಕಾಣುತ್ತದೆ. ಜಗತ್ತು ಸುಂದರವಾಗಿ ಕಾಣಬೇಕಾದರೆ ಮನಸ್ಸು ಸುಂದರವಾಗಿರಬೇಕು.

ಘಟದೊಳಗಣ ಬಯಲು, ಮಠದೊಳಗಣ ಬಯಲು, ಬಯಲು, ಬಯಲು, ತಾನೆಲ್ಲಾ ಬಯಲು, ಬಿಡಾಡಿ ಬಯಲು, ಎನ್ನುತ್ತಾ ಘಟ ಮತ್ತು ಮಠಗಳನ್ನು ಸಮನ್ವಯಿಸಿ ವಿವೇಚಿಸುವ ಈ ವಚನ ಜಡಚೈತನ್ಯಗಳ ವ್ಯೂಮಾತೀತ ಸಂಲಗ್ನತೆಯನ್ನು ತಿಳಿಸುತ್ತದೆ. ಜ್ಞಾನ, ಅನುಭಾವ ಎಲ್ಲವೂ ಅವರವರ ಸಾಮರ್ಥ್ಯಕ್ಕೆ ನಿಲುಕುವುದೇ ಹೊರತು, ಅದು ವ್ಯಕ್ತಿಯ ದೇಹ ಸಂಪತ್ತಿನ ಮೇಲೆ ಆಧಾರಿತವಾಗಿಲ್ಲ ಎಂದು ತಿಳಿಸುತ್ತದೆ.

ಬಯಲು, ಬಯಲನೇ ಬಿತ್ತಿ, ಬಯಲು ಬಯಲನೇ ಬೆಳೆದು....ನಾ ನಿಮ್ಮ ನಂಬಿ ಬಯಲಾದೆನು ಗುಹೇಶ್ವರ. ಬಯಲ ಭಾವನೆ ಯಾವುದು? 'ಭಾವನೆ' ಎಂದ ತಕ್ಷಣ ಅದು ಯಾಂತ್ರಿಕವಲ್ಲ ಎನ್ನುವ ಅರಿವು ನಮಗೆ ಉಂಟಾಗುತ್ತದೆ. ಅದೊಂದು ಅನುಭವಿಸಲು ಸಾಧ್ಯವಿರುವ ದ್ರವ್ಯ, ಆ ದ್ರವ್ಯವೇ ಪ್ರಜ್ಞೆ, ಆ ಪ್ರಜ್ಞೆ, ಸದಾ ಪ್ರವಹಿಸುವ ಜೀವಂತ ದ್ರವ್ಯವೆಂದು ನಾವು ಅರಿವಿಗೆ ತಂದುಕೊಂಡಾಗ ಮಾತ್ರ ನಾವು ಸಮಸ್ತ ಮಾನವ ಜನಾಂಗದ ಸ್ಥಿತಿಯನ್ನು ಗ್ರಹಿಸಲು ಸಾಧ್ಯ ಬರಿಯ ಬಯಲೆನಿಸಿದ ಪರವಸ್ತುವನ್ನು ಅರಿತು ಅನುಭವಿಸಿದಾಗ ಗುರುವು ಶಿಷ್ಯನಲ್ಲಿ ಬಯಲು ಜ್ಞಾನವೆಂಬ ಬಿಜವನ್ನು ಬಿತ್ತಿದಾಗ ಬೆಳೆವ ಜ್ಞಾನ ವೃಕ್ಷದಲ್ಲಿ ಪರ ವಸ್ತುವೇ ನಾನೆಂಬ ಫಲ ಪ್ರಾಪ್ತಿಯಾಗುತ್ತದೆ. ಆಗ ಶಿಷ್ಯನ ಭಾವನೆಗಳೆಲ್ಲ ಬಯಲಾಗುತ್ತವೆ.

ಶರಣೆ ಗೊಗ್ಗವ್ವೆ ದೇವರನ್ನು ನಾಸ್ತಿನಾಥ ಎಂದು ಕರೆದಳು. ಏನಿಲ್ಲದ ಅದು ಎಲ್ಲವನು ನಿಯಂತ್ರಿಸುವುದು. ಇದು ಸತ್ಯದ ದರ್ಶನ, ಆದರೂ ಬದುಕು ಸುಂದರವಾಗಿರಬೇಕು. ಹೂವು-ಗಿಡ-ಮರ-ಬಳ್ಳಿಗಳು, ನದಿಗಳು, ಸುಂದರವಾಗಿ ಕಾಣುತ್ತವೆ. ಇವು ಬಯಲಲ್ಲೇ ಇದ್ದರೂ ಬಯಲನ್ನು ನಾವು ಗಮನಿಸುವುದಿಲ್ಲ, ಬಯಲು ಬಯಲಾಗದೆ ಸದಾಕಾಲ ಹಾಗೆ ಉಳಿಯುತ್ತದೆ, ಹೂ ಅರಳಿ ಸುಂದರ ನಗೆ ಹಾಗೂ ಪರಿಮಳ ಬೀರುತ್ತದೆ. ಹೂವು ಹೇಳುತ್ತದೆ, ನಾಳೆ ನಾನು ಇರುವುದಿಲ್ಲ, ಇಂದು ಸುಗಂಧ ಬೀರಿ ನಗುತ್ತಲಿರುವೆನು ಎಂದಿತು. ಅದರಂತೆ ಮನುಷ್ಯ ಸುಂದರ ಬದುಕು ಸಾಗಿಸಬೇಕು, ಒಳ್ಳೆಯ ಕೆಲಸಗಳನ್ನು ಮಾಡಬೇಕು, ಜಗತ್ತಿನ ವಸ್ತುಗಳು ಶಾಶ್ವತವಾಗಿ ಇರುವುದಿಲ್ಲ ಎಂಬ ಸತ್ಯವನ್ನು ಅರಿತಿರಬೇಕು, ಕೈಬಿಟ್ಟು ಹೋದುದಕ್ಕೆ ಮರಗುವ ಅಗತ್ಯವಿಲ್ಲ, ಮರೆಯಾಗಿ ಹೋಗುವುದು ನಿಶ್ಚಿತ ಎಂಬ ಅರಿವು ಮನುಷ್ಯನಿಗೆ ಇರಬೇಕು ಎಂದು ತಿಳಿಸಿದರು.



ಸುತ್ತೂರು ಶ್ರೀಕ್ಷೇತ್ರದಲ್ಲಿ ಪ್ರವಚನ ನೀಡುತ್ತಿರುವ ಪೂಜ್ಯಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು. ಚಿತ್ರದಲ್ಲಿ ಶ್ರದ್ಧೆಯಿಂದ ಪ್ರವಚನ ಆಲಿಸುತ್ತಿರುವ ಶ್ರೋತೃಗಳು.